# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2011-12ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ವಾರ್ಷಿಕವಾಗಿ ಒಂದು ಕೋಟಿ ರೂ.ಗಳ ಅಭಿವೃದ್ಧಿ ಅನುದಾನವನ್ನು ಹಾಗು ತಾಲ್ಲೂಕು ಪಂಚಾಯತಿಗಳಿಗೆ ವಾರ್ಷಿಕವಾಗಿ ಒದಗಿಸಲಾಗಿರುವ ಒಂದು ಕೋಟಿ ರೂ.ಗಳ ಅನಿರ್ಬಂಧಿತ ಅನುದಾನವನ್ನು ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಬಗ್ಗೆ ಮಾರ್ಗಸೂಚಿಗಳು.

---

ಓದಲಾಗಿದೆ:

1. ಸರ್ಕಾರಿ ಆದೇಶ ಸಂ.ಗ್ರಾಅಪ 127 ಜಿಪಸ 2011, ದಿನಾಂಕ 25.05.2011.

ಪ್ರಸ್ತಾವನೆ:

2011-12ನೇ ಸಾಲಿನಲ್ಲಿ ಪ್ರತಿ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ಜಿಲ್ಲೆಯಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಒಂದು ಕೋಟಿ ರೂ.ಗಳ ಅಭಿವೃದ್ಧಿ ಅನುದಾನ ಹಾಗೂ ಪ್ರತಿ ತಾಲ್ಲೂಕು ಪಂಚಾಯತಿಗೆ ಒಂದು ಕೋಟಿ ರೂ.ಗಳ ಅನಿಬಂಧಿತ ಅನುದಾನವನ್ನು ಬಿಡುಗಡೆ ಮಾಡಲು ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ, ಮೇಲೆ ಓದಲಾದ ಆದೇಶದಲ್ಲಿ ಪ್ರತಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಜಿಲ್ಲೆಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ವಾರ್ಷಿಕ ರೂ.1.00 ಕೋಟಿಗಳನ್ನು ಹಾಗು ಪ್ರತಿ ತಾಲ್ಲೂಕು ಪಂಚಾಯತಿಗೆ ರೂ.1.00 ಕೋಟಿ ಅನಿರ್ಬಂಧಿತ ಅನುದಾನವನ್ನು ಒದಗಿಸಲಾಗಿದ್ದು, ಈ ಅನುದಾನದ ಬಳಕೆಯ ಬಗ್ಗೆ ಕ್ರಿಯಾ ಯೋಜನೆಯನ್ನು ರೂಪಿಸಲು ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದೆಂದು ತಿಳಿಸಲಾಗಿತ್ತು. ಅದರಂತೆ, ಜಿಲ್ಲಾ ಪಂಚಾಯತಿ ಅಧ್ಯಕ್ಷರು ಹಾಗು ತಾಲ್ಲೂಕು ಪಂಚಾಯತಿಯು ತನ್ನ ಕಾರ್ಯವ್ಯಾಪ್ತಿಯಲ್ಲಿ ಪ್ರಸ್ತಾಪಿತ ಒಂದು ಕೋಟಿ ರೂ.ಅನುದಾನವನ್ನು ಬಳಸುವ ಬಗ್ಗೆ ಕೆಳಕಂಡ ಮಾರ್ಗಸೂಚಿಗಳನ್ನು ಹಾಗು ನಿಷಿದ್ಧಗಳನ್ನು ನಿಗದಿಗೊಳಿಸಿ ಕೆಳಕಾಣಿಸಿದ ಆದೇಶ ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂ.ಗ್ರಾಅಪ 127 ಜಿಪಸ 2011, ಬೆಂಗಳೂರು, ದಿನಾಂಕ 15.07.2011

ಮೇಲ್ಕಾಣಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಪ್ರತಿ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಿಗೆ ಹಾಗು ಪ್ರತಿ ತಾಲ್ಲೂಕು ಪಂಚಾಯತಿಗೆ ವಾರ್ಷಿಕ ರೂ.1.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನವನ್ನು ಬಳಸುವ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ನಿಷಿದ್ಧಗಳನ್ನು ನಿಗದಿಗೊಳಿಸಲಾಗಿದೆ.

## (i) ಜಿಲ್ಲಾ ಪಂಚಾಯತಿ ಹಂತದಲ್ಲಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳು:

(1) ಜಲಾನಯನ ಆಧಾರದ ಮೇಲೆ ನೀರು ತಡೆ ವಿನ್ಯಾಸಗಳು, ಭೂ ಮತ್ತು ಜಲಸಂರಕ್ಷಣೆ

(2) ಕುಡಿಯುವ ನೀರಿನ ತೆರೆದ ಬಾವಿಗಳ ನಿರ್ಮಾಣ

(3) ಶಾಲೆ ಮತ್ತು ಅಂಗನವಾಡಿಗಳಿಗೆ ನೀರು ಸರಬರಾಜು ಮತ್ತು ಶೌಚಾಲಯಗಳು, ಅಡುಗೆ ಕೋಣೆಗಳ ನಿರ್ಮಾಣ

(4) ಮನೆಗಳಿಗೆ ನೀರಿನ ಮೀಟರುಗಳು

(5) ನೀರು ಎಲ್ಲಿ ರಾಸಾಯನಿಕಗೊಂಡಿರುತ್ತದೆಯೋ ಅಲ್ಲಿ ಮಳೆ ನೀರು ಸಂಗ್ರಹಣೆ

(6) ಸರ್ಕಾರಿ ಶಿಕ್ಷಣ ಸಂಸ್ಥೆಗಳ ಕಟ್ಟಡಗಳ ದುರಸ್ತಿ

(7) ವಿದ್ಯುತ್ ಸಂಪರ್ಕ ಇಲ್ಲದ ಕಡೆ ಸೋಲಾರ್ ಲೈಟ್, ಬೀದಿ ದೀಪದ ವ್ಯವಸ್ಥೆ

(8) ಜಿಲ್ಲಾ ಪಂಚಾಯತಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಕಡೆಗಳಲ್ಲಿ ಜಿಲ್ಲಾ ಪಂಚಾಯತ್ ಕಚೇರಿ ಕಟ್ಟಡಗಳ ನಿರ್ಮಾಣ ಹಾಗೂ ಪೀಠೋಪಕರಣ ಖರೀದಿ ಮತ್ತು ಜಿಲ್ಲಾ ಪಂಚಾಯತಿಗಳ ವಸತಿ ಕಟ್ಟಡಗಳ ನಿರ್ಮಾಣ

(9) ಕಾಲು ಸಂಕಗಳ ನಿರ್ಮಾಣ

(10) ಸರ್ಕಾರದ ದೈಹಿಕ ಶಿಕ್ಷಣ ತರಬೇತಿ ಸಂಸ್ಥೆಗಳ ಕಟ್ಟಡಗಳು

(11) ತೋಟಗಾರಿಕೆ ಉತ್ಪನ್ನಗಳನ್ನು ಸಂರಕ್ಷಿಸಲು ಶೈತ್ಯಾಗಾರಕ ಘಟಕಗಳು

(12) ಸರ್ಕಾರದ ಪೂರ್ವಾನುಮೋದನೆ ಪಡೆದು 5 ವರ್ಷದ ಅವಧಿಯಲ್ಲಿ 3 ಬಾರಿ ಗರಿಷ್ಠ 3 ಹೊರ ರಾಜ್ಯಗಳಿಗೆ ಮೀರದಂತೆ ಅಧ್ಯಯನ ಪ್ರವಾಸ ಕೈಗೊಳ್ಳುವುದು.

(13) ಸರ್ಕಾರಿ ಪ್ರೌಢಶಾಲೆ, ಪದವಿ ಪೂರ್ವ ಹಾಗು ಪದವಿ ಕಾಲೇಜು ಕಟ್ಟಡಗಳ ನಿರ್ಮಾಣ, ನಿರ್ವಹಣೆ, ಸೇರ್ಪಡೆ-ಮಾರ್ಪಾಡುಗಳನ್ನು ಜಿಲ್ಲಾ ಪಂಚಾಯತ್ ಅನುದಾನದಿಂದ ಕೈಗೊಳ್ಳಬಹುದು.

(14) ರೂ.10.00 ಲಕ್ಷಗಳವರೆಗಿನ ಕಾಮಗಾರಿಯನ್ನು ಪೂರ್ಣ ಅನುದಾನದ ಸಹಿತ ಒಂದೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸತಕ್ಕದ್ದು. ಪೂರ್ಣ ಅನುದಾನವನ್ನು ಒಂದೇ ಲೆಕ್ಕಶೀರ್ಷಿಕೆ ಅಥವಾ ಇತರೆ ಲೆಕ್ಕ ಶೀರ್ಷಿಕೆಗಳ ಮುಖಾಂತರ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

(15) ಕರ್ನಾಟಕ ಪಂ.ರಾಜ್ ಅಧಿನಿಯಮ, ಪ್ರಕರಣ 184 (ಅನುಸೂಚಿ-3) ಹಾಗು ಅಧಿಸೂಚನೆ ಸಂ.ಗ್ರಾಅಪ 367 ಜಿಪಸ 2002, ದಿನಾಂಕ 18.08.2003ರಲ್ಲಿ ಹೊರಡಿಸಿರುವ ಚಟುವಟಿಕೆ ನಕ್ಷೆಯಲ್ಲಿ ಜಿಲ್ಲಾ ಪಂಚಾಯತಿಗಳಿಗೆ ವಹಿಸಿರುವ ಕಾರ್ಯಕ್ರಮಗಳಿಗೂ ಸಹ ಅನುದಾನ ವಿನಿಯೋಗಿಸುವುದು.

## ನಿಷೇಧಿತ ಕಾಮಗಾರಿಗಳು:

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವ ಕಟ್ಟಡಗಳನ್ನು ನಿರ್ಮಿಸುವುದನ್ನು;
2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;
3. ಪಂಚಾಯತ್ ಸಂಸ್ಥೆಗಳಿಗೆ ಭೂಮಿಯನ್ನು ಸ್ವಾಧೀನಗೊಳಿಸುವುದನ್ನು ಅಥವ ಸ್ವಾಧೀನಗೊಳಿಸಲಿರುವ ಭೂಮಿಗೆ ಪರಿಹಾರ ನೀಡುವುದನ್ನು;
4. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವ ಸಾಲ ನೀಡುವುದನ್ನು;
5. ಕಚೇರಿಯ ಆವರ್ತಕ ವೆಚ್ಚ ಅಥವಾ ಕಚೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;
6. ವಾಹನಗಳ ಖರೀದಿ ಅಥವ ಬಾಡಿಗೆ ಮೇಲೆ ವಾಹನಗಳನ್ನು ಕಚೇರಿ ಕಾರ್ಯಕ್ಕಾಗಿ ಪಡೆಯುವುದನ್ನು;
7. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು

## (ii) ತಾಲ್ಲೂಕು ಪಂಚಾಯತಿ ಹಂತದಲ್ಲಿ ತೆಗೆದುಕೊಳ್ಳಬಹುದಾದ ಕಾಮಗಾರಿಗಳು:

1. ಸಾಮಾಜಿಕ ಅರಣ್ಯ, ಅರಣ್ಯದಲ್ಲಿ ಭೂ ಸಾರ ಸಂರಕ್ಷಣೆ, ನೆಡುತೋಪು ನಿರ್ಮಾಣ
2. ಕುಡಿಯುವ ನೀರಿನ ತೆರೆದ ಬಾವಿಗಳ ನಿರ್ಮಾಣ
3. ಶಾಲೆ ಮತ್ತು ಅಂಗನವಾಡಿಗಳಿಗೆ ನೀರು ಸರಬರಾಜು ಮತ್ತು ಶೌಚಾಲಯಗಳು, ಅಡುಗೆ ಕೋಣೆಗಳ ನಿರ್ಮಾಣ
4. ಆಹಾರಧಾನ್ಯ ಸಂಗ್ರಹಣೆ ದಾಸ್ತಾನು ಮಳಿಗೆ ಹಾಗೂ ಮಳಿಗೆಗಳು
5. ಸರ್ಕಾರಿ ಶಿಕ್ಷಣ ಸಂಸ್ಥೆಗಳ ಕಟ್ಟಡಗಳ ದುರಸ್ತಿ
6. ವಿದ್ಯುತ್ ಸಂಪರ್ಕ ಇಲ್ಲದ ಕಡೆ ಸೋಲಾರ್ ಲೈಟ್, ಬೀದಿ ದೀಪದ ವ್ಯವಸ್ಥೆ
7. ಸ್ಯಾನಟರಿ ನ್ಯಾಪ್‌ಕಿನ್ ಪ್ರಮೋಷನ್

8. ತಾಲ್ಲೂಕು ಪಂಚಾಯತಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವ ಕಡೆಗಳಲ್ಲಿ ತಾಲ್ಲೂಕು ಪಂಚಾಯತ್ ಕಚೇರಿ ಕಟ್ಟಡಗಳ ನಿರ್ಮಾಣ ಹಾಗೂ ಪೀಠೋಪಕರಣ ಖರೀದಿ ಮತ್ತು ತಾಲ್ಲೂಕು ಪಂಚಾಯತಿಗಳ ವಸತಿ ಕಟ್ಟಡಗಳ ನಿರ್ಮಾಣ

9. ಸಾರ್ವಜನಿಕ ಗ್ರಂಥಾಲಯಗಳು ಮತ್ತು ವಾಚನಾಲಯಗಳ ನಿರ್ಮಾಣ

10. ಅಧಿಕೃತವಾಗಿ ಮಂಜೂರಾದ ಹಾಗು ದಾಖಲೆಗಳನ್ನು ಹೊಂದಿರುವ ರುದ್ರಭೂಮಿ/ಸ್ಮಶಾನ ಜಾಗದ ಅಭಿವೃದ್ಧಿ

11. ಸರ್ಕಾರಿ ಶಾಲೆಗಳಲ್ಲಿ ಶಾಲಾ ವನ, ಶಾಲಾ ಕೈತೋಟ ಔಷಧಿ ವನ ನಿರ್ಮಾಣ

12. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕಟ್ಟಡಗಳ ನಿರ್ಮಾಣ, ನಿರ್ವಹಣೆ, ಸೇರ್ಪಡೆ-ಮಾರ್ಪಾಡುಗಳನ್ನು ತಾಲ್ಲೂಕು ಪಂಚಾಯತ್‌ನಿಂದ ಕೈಗೊಳ್ಳಬಹುದು.

13. ರೂ.10.00 ಲಕ್ಷಗಳವರೆಗಿನ ಕಾಮಗಾರಿಯನ್ನು ಪೂರ್ಣ ಅನುದಾನದ ಸಹಿತ ಒಂದೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸತಕ್ಕದ್ದು. ಪೂರ್ಣ ಅನುದಾನವನ್ನು ಒಂದೇ ಲೆಕ್ಕಶೀರ್ಷಿಕೆ ಅಥವಾ ಇತರೆ ಲೆಕ್ಕ ಶೀರ್ಷಿಕೆಗಳ ಮುಖಾಂತರ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ.

14. ಕರ್ನಾಟಕ ಪಂ.ರಾಜ್ ಅಧಿನಿಯಮ, ಪ್ರಕರಣ 145 (ಅನುಸೂಚಿ-2) ಹಾಗು ಅಧಿಸೂಚನೆ ಸಂ.ಗ್ರಾಅಪ 367 ಜಿಪಸ 2002, ದಿನಾಂಕ 18.08.2003ರಲ್ಲಿ ಹೊರಡಿಸಿರುವ ಚಟುವಟಿಕೆ ನಕ್ಷೆಯಲ್ಲಿ ತಾಲ್ಲೂಕು ಪಂಚಾಯತಿಗಳಿಗೆ ವಹಿಸಿರುವ ಕಾರ್ಯಕ್ರಮಗಳಿಗೂ ಸಹ ಅನುದಾನ ವಿನಿಯೋಗಿಸುವುದು.

**<u>ನಿಷೇಧಿತ ಕಾಮಗಾರಿಗಳು:</u>**

1. ಯಾವುದೇ ವ್ಯಕ್ತಿಯ ಹೆಸರಿನಲ್ಲಿ ಅಥವಾ ವೈಯುಕ್ತಿಕ ಜ್ಞಾಪಕಾರ್ಥದಲ್ಲಿ ಪ್ರತಿಮೆ ನಿರ್ಮಿಸುವುದು, ಆಸ್ತಿ ಗಳಿಸುವುದನ್ನು ಅಥವಾ ಕಟ್ಟಡಗಳನ್ನು ನಿರ್ಮಿಸುವುದನ್ನು;

2. ಧಾರ್ಮಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದನ್ನು ಹಾಗು ಆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಕಟ್ಟಡ ಅಥವಾ ಇತರ ಕಾಮಗಾರಿಗಳನ್ನು ತೆಗೆದುಕೊಳ್ಳುವುದನ್ನು;

3. ಪಂಚಾಯತ್ ಸಂಸ್ಥೆಗಳಿಗೆ ಭೂಮಿಯನ್ನು ಸ್ವಾಧೀನಗೊಳಿಸುವುದನ್ನು ಅಥವಾ ಸ್ವಾಧೀನಗೊಳಿಸಲಿರುವ ಭೂಮಿಗೆ ಪರಿಹಾರ ನೀಡುವುದನ್ನು;

4. ವೈಯುಕ್ತಿಕ ಫಲಾನುಭವಿಗಳಿಗೆ ಸಹಾಯಾನುದಾನ ಅಥವಾ ಸಾಲ ನೀಡುವುದನ್ನು;

5. ಕಚೇರಿಯ ಆವರ್ತಕ ವೆಚ್ಚ ಅಥವಾ ಕಚೇರಿಯ ನಿರ್ವಹಣೆಗೆ ಅಗತ್ಯವಾಗಿರುವ ಸಾಧನಗಳ ಖರೀದಿ ಮಾಡುವುದನ್ನು;

6. ವಾಹನಗಳ ಖರೀದಿ ಅಥವ ಬಾಡಿಗೆ ಮೇಲೆ ವಾಹನಗಳನ್ನು ಕಚೇರಿ ಕಾರ್ಯಕ್ಕಾಗಿ ಪಡೆಯುವುದನ್ನು;

7. ಖಾಸಗಿ ಸಂಸ್ಥೆಗಳಿಗೆ ಸಹಾಯ ನೀಡುವುದನ್ನು;

ಮೇಲೆ ತಿಳಿಸಿದ ಅನುದಾನವನ್ನು ಬಳಸುವಾಗ ಕ್ರಿಯಾ ಯೋಜನೆಯನ್ನು ತಯಾರಿಸಿ ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಹಾಗು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ರವರಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸಬೇಕು. ಕ್ರಿಯಾ ಯೋಜನೆಯಲ್ಲಿ ಇಲ್ಲದ ಕಾಮಗಾರಿಗಳನ್ನು ಯಾವುದೇ ಕಾರಣಕ್ಕೂ ಕೈಗೊಳ್ಳಬಾರದು. ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಸಕ್ಷಮ ಪ್ರಾಧಿಕಾರದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಪಡೆದು ಅನುಷ್ಠಾನಗೊಳಿಸಬೇಕು ಹಾಗು ಕಾಮಗಾರಿಗಳನ್ನು ಅನುಷ್ಠಾನ ಮಾಡುವಾಗ ಅಥವಾ ಸಾಮಗ್ರಿಗಳನ್ನು ಖರೀದಿಸುವಾಗ/ಸಂಗ್ರಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಎಂ.ಎಸ್.ರವಿಶಂಕರ್)
ಸರ್ಕಾರದ ಕಾರ್ಯದರ್ಶಿ (ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗಾ ಹಾಗು ಬೆಳಗಾವಿ ವಿಭಾಗ
3. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು. 30
4. ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರು.
5. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು. 30
6. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು.

7. ಎಲ್ಲಾ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು. 176
8. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು. 176
9. ಕರ್ನಾಟಕ ವಿಕಾಸ/ವೆಬ್‌ಸೈಟ್ 10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಗಳು:

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
2. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಯೋಜನಾ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾಜ್ ಇಲಾಖೆ.

O/C

18/2